**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ನವಲಗುಂದ**

| | |
|---|---|
| ಸಿ.ಸಿ. ನಂಬರ್ | - 597/2024 |
| ಸಿ.ಡಬ್ಲೂ | - 01 |
| ಪಿ.ಡಬ್ಲೂ | - 01 |
| ಸಾಕ್ಷಿಯ ಹೆಸರು | - ನಿಂಗಪ್ಪ ನೀಲಪ್ಪ ಕೊರುಗಲ್ |
| ವಯಸ್ಸು | - 40 ವರ್ಷ |
| ಉದ್ಯೋಗ | - ಒಕ್ಕಲುತನ |
| ವಾಸ ಸ್ಥಳ | - ಅಣ್ಣಿಗೇರಿ |

ದಿನಾಂಕಃ 25/09/2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-**

ಪ್ರಕರಣದ ಆರೋಪಿಯ ಪರಿಚಯ ಇದೆ. ಚಾಸಾ-5, 7 ಮತ್ತು 8 ರವರ ಪರಿಚಯವಿದೆ. ಚಾಸಾ-6 ಮತ್ತು 9 ರವರು ರವರ ಪರಿಚಯವಿಲ್ಲ. ಮೃತ ಬಸವಣೆಪ್ಪ ಬೇಟಗೇರಿ ನನ್ನ ಮಾವ.

ಈಗ ಅಂದಾಜು 2 ವರ್ಷಗಳ ಹಿಂದೆ ಮ.12.30 ಗಂಟೆಗೆ ಗದಗ-ಹುಬ್ಬಳ್ಳಿ ರಾಷ್ಟ್ರೀಯ ಹೆದ್ದಾರಿಯ ಅಣ್ಣಿಗೇರಿ ಪಟ್ಟಣದ ಕೆ ಎಚ್ ಬಿ ಕಾಲೋನಿಯ ಹತ್ತಿರ ನಡೆದ ಅಪಘಾತದಲ್ಲಿ ನನ್ನ ಮಾವ ಬಸವಣೆಪ್ಪ ಬೇಟಗೇರಿ ರವರು ಮೃತಪಟ್ಟಿರುತ್ತಾರೆ. ಆದರೆ ಸದರಿ ಅಪಘಾತ ಯಾವ ರೀತಿ ಆಯಿತು ಮತ್ತು ಯಾರ ತಪ್ಪಿನಿಂದ ಆಯಿತು ಎಂದು ಹೇಳಲಾಗುವದಿಲ್ಲ. ಸದರಿ ಸಮಯಕ್ಕೆ ಮೋಟಾರ ಸೈಕಲ ಯಾವ ರೀತಿ ಹೋಗುತಿತ್ತು ಎಂದು ಹೇಳಲಾಗುವದಿಲ್ಲ. ನಂತರ ನಾನು ಪೋಲಿಸ ಠಾಣೆಗೆ ಹೋಗಿ ದೂರನ್ನು ಸಲ್ಲಿಸಿರುತ್ತೇನೆ. ಸಾಕ್ಷಿ ನೋಡಿ ಗುರುತಿಸಿದ ದೂರನ್ನು **ನಿಪಿ-1** ಎಂದು ಗುರುತಿಸಲಾಯಿತು. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿರುವುದಿಲ್ಲ. ಪ್ರಕರಣಕ್ಕೆ ಸಂಬಂದಿಸಿ ನಾನು ಪೋಲಿಸರಿಗೆ ಯಾವುದೇ ಹೇಳಿಕೆಗಳನ್ನು ನೀಡಿರುವುದಿಲ್ಲ.

(ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ಅನುಮತಿ ಕೊರಿದ್ದು ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಮಾನ್ಯ ಸರಕಾರಿ ಸಹಾಯಕ ಅಭಿಯೋಜಕರಿಂದ –**

ದಿಃ 19-02-2023 ರಂದು ಮ.12.30 ಗಂಟೆಗೆ ಗದಗ-ಹುಬ್ಬಳ್ಳಿ ರಾಷ್ಟ್ರೀಯ ಹೆದ್ದಾರಿಯ ಅಣ್ಣಿಗೇರಿ ಪಟ್ಟಣದ ಕೆ ಎಚ್ ಬಿ ಕಾಲೋನಿಯ ಹತ್ತಿರ 1 ನೇ ಆರೋಪಿ ತನ್ನ ಕಾರ್ ಸಂಃ KA-51/AA-7685 ನೇದ್ದನ್ನು ಹುಬ್ಬಳ್ಳಿ ಕಡೆಯಿಂದ ಗದಗ ಕಡೆಗೆ ಅತೀ ವೇಗ ಮತ್ತು  ಅಲಕ್ಷ್ಯತನದಿಂದ ಹಾಗೂ ಮಾನವ ಜೀವಕ್ಕೆ ಅಪಾಯಕಾರಿ ಆಗುವ ರೀತಿಯಲ್ಲಿ ಚಲಾಯಿಸಿ 2 ನೇ ಆರೋಪಿಯಾದ ನನ್ನ ಮಾವ ಚಾಲನಾ ಪರವಾನಗೆ ಹೊಂದದೇ ಹಾಗೂ ಹೆಲ್ಮೇಟ್ ಧರಿಸದೇ ಮೋಟಾರ ಸೈಕಲ್ ಸಂಃ KA-25/HE-8878 ನೇದ್ದನ್ನು ಹೆದ್ದಾರಿಯಲ್ಲಿ ವಾಹನ ಬರುವುದನ್ನು ಗಮನಿಸದೇ ರಸ್ತೆ ಕ್ರಾಸ್ ಮಾಡಿದ್ದರಿಂದ ಪರಸ್ಪರ ರ ತಪ್ಪಿನಿಂದ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ.  ಸದರಿ ಅಪಘಾತದಲ್ಲಿ ನನ್ನ ಮಾವ ಬಸವಣೆಪ್ಪ ರವರು  ಭಾರಿ ಗಾಯಗೊಂಡು ಮೃತಪಟ್ಟಿರುತ್ತಾರೆ ಎಂದರೆ ಸರಿಯಲ್ಲ.  ಈ ಮೇಲಿನಂತೆ ನಿಪಿ-1 ನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಅದಕ್ಕೆ ಅನುಗುಣವಾಗಿ ಪೋಲಿಸರಿಗೆ ಹೇಳಿಕೆಗಳನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಅಲ್ಲಗೆಳೆದ ಭಾಗಗಳನ್ನು **ನಿಪಿ-2 ಮತ್ತು 3** ಎಂದು ಗುರುತಿಸಲಾಯಿತು. ಪೋಲಿಸರು ನನ್ನ ಸಮಕ್ಷಮ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಅಪಘಾತ ಆರೋಪಿಯ ತಪ್ಪಿನಿಂದಾಗಿದೆ ಎಂದರೆ ಸರಿಯಲ್ಲ. ನಾನು ಆರೋಪಿಯೊಂದಿಗೆ ರಾಜಿ ಮಾಡಿಕೊಂಡಿದ್ದೇನೆ ಎಂದರೆ ಸರಿ. ರಾಜಿ ಆದಕಾರಣ ಸುಳ್ಳು ಸಾಕ್ಷಿ ನುಡಿಯತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಶ್ರೀ ಕೆ ಬಿ ಎಸ್ ವಕೀಲರಿಂದ**

ಏನು ಇಲ್ಲ ಎಂದು ನುಡಿಯುತ್ತಾರೆ.

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ.  ಇದೆ.**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**

**ನವಲಗುಂದ.**